

## ಇಷ್ಟಾರ್ಥ ಸಿದ್ಧಿಸುವ ಕಿಸಗಾಲ ಗೊಂಬೆ

ಚಾಲುಕ್ಯರ ರಾಜಧಾನಿ, ಐತಿಹಾಸಿಕ ಸ್ಥಳ ಬಾದಾಮಿ ಬನಶಂಕರಿ ಜಾತ್ರೆಯಲ್ಲಿ ವಿರಳವಾಗಿ ಸಿಗುವ ಕಿಸಗಾಲ ಗೊಂಬೆಗೆ ಎಲ್ಲಿಲ್ಲದ ಬೇಡಿಕೆ. ಹೌದು, ಶ್ರೀ ಬನಶಂಕರಿದೇವಿ ರಥೋತ್ಸವದ ನಂತರ ಜಾತ್ರೆಯಲ್ಲಿ ಭಕ್ತರ ಇಷ್ಟಾರ್ಥ ಸಿದ್ಧಿಸುವ ಟೊಂಕದಲ್ಲಿ ಮಗುವನ್ನು ಇಟ್ಟುಕೊಂಡಿರುವ ಸ್ತ್ರೀ ರೂಪದ ಈ ಕಿಸಗಾಲ ಗೊಂಬೆಗಳು ರಥೋತ್ಸವದ ದಿನದಂದು ಮಾತ್ರ ದೊರೆಯುತ್ತವೆ. ಮಕ್ಕಳಾಗದ ವಿವಾಹಿತರು, ಮದುವೆಯಾಗದ ಅವಿವಾಹಿತರು, ಅನಾರೋಗ್ಯ ಪೀಡಿತರು ತಮ್ಮ ಕಷ್ಟಗಳು ದೂರಾಗುವಂತೆ ಬೇಡಿಕೊಂಡು ಈ ಗೊಂಬೆಗಳನ್ನು ತೆಗೆದುಕೊಂಡು ಹೋದರೆ ತಮ್ಮ ಇಷ್ಟಾರ್ಥ ಈಡೇರುತ್ತವೆ ಎನ್ನುವ ನಂಬಿಕೆ ಇದೆ. ಸಹೋದರತ್ವದ ಸಂಕೇತವಾಗಿಯೂ ಗೊಂಬೆಗಳನ್ನು ಕೊಡಿಸುವುದುಂಟು ಎಂಬ ಮಾತಿದೆ.

ಈ ಗೊಂಬೆಯನ್ನು ಖರೀದಿಸಿದರೆ ಒಳ್ಳೆಯದಾಗುತ್ತದೆ ಎಂಬ ನಂಬಿಕೆ ಕೆಲ ಕುಟುಂಬ ವರ್ಗದವರಲ್ಲಿದೆ. ಹೀಗಾಗಿ ರಥೋತ್ಸವದ ನಂತರ ಈ ಗೊಂಬೆಗಳ ಖರೀದಿಗೆ ಮುಗಿಬೀಳುತ್ತಾರೆ. ಬೆರಳೆಣಿಕೆಯಷ್ಟು ಇರುವ ಗೊಂಬೆಗಳನ್ನು ಖರೀದಿಸಲು ಸ್ವಲ್ಪ ತಡವಾದರು ಕೂಡಾ ಅವುಗಳು ಸಿಗಲ್ಲ ಎಂಬ ಮಾತನ್ನು ಖರೀದಿಗೆ ಬಂದಿದ್ದ ಕೆಲವರು ತಿಳಿಸುತ್ತಾರೆ. ಆದರೆ, ಕಾಲ ಬದಲಾದಂತೆ ಸಂಪ್ರದಾಯ, ಸಂಸ್ಕೃತಿ ಕೂಡ ತಮ್ಮ ವರ್ಚಸ್ಸು ಕಳೆದುಕೊಳ್ಳುತ್ತಿವೆ. ಕಿಸಗಾಲ ಗೊಂಬೆಗಳ ಮಾರಾಟ ಕೂಡಾ ಈಗ ಅಪರೂಪವಾಗುತ್ತಿದೆ.

—ಮಲ್ಲಿಕಾರ್ಜುನ ರಾಜನಾಳ, ಬಾಗಲಕೋಟ



## ಸ್ವಯಂಭೊ

ಮಳೆ ಬಿದ್ದಾಕ್ಷಣ ಚಿಗುರುವ ಕಾಡುಬಳ್ಳಿಗಳು ಸಿಕ್ಕ ಸಿಕ್ಕ ಮರ ಗಿಡಗಳನ್ನು ಬಳಸಿಕೊಂಡು, ಹಬ್ಬುವುದು ಈ ಬಳ್ಳಿಯ ಗುಣ. ಇದನ್ನು ಸ್ವಯಂಭೊ ಎಂದು ಕರೆಯುತ್ತಾರೆ. ಈ ಬಳ್ಳಿಗೆ ತನ್ನ ಸುತ್ತಮುತ್ತಲು ಊರುಗೋಲಾಗಿ ಯಾವುದೇ ವಸ್ತು ಅಥವಾ ಮರ, ಗಿಡ ಸಿಕ್ಕರೂ ಅದನ್ನೇ ಬಳಸಿಕೊಂಡು ಸೊಂಪಾಗಿ ಬೆಳೆಯುತ್ತದೆ. ತನಗೆ ಊರುಗೋಲಾದ ವಸ್ತು ಅಥವಾ ಮರ, ಗಿಡವೇ ಹೊರಜಗತ್ತಿಗೆ ಕಾಣದಷ್ಟು ದಟ್ಟವಾಗಿ ಬೆಳೆಯುವುದು ಈ ಬಳ್ಳಿಯ ಗುಣ.

—ಸುಲೋಚನಾ ವಾದಿರಾಜ್, ಶಿವಮೊಗ್ಗ

## ಜಾಲಂಧ್ರ ಕಂ ದೇವತಾಮೂರ್ತಿ!

ಇದು ಇರುವುದು ಬೆಂಗಳೂರು ಸಮೀಪ ಇರುವ ಚಿಕ್ಕಬಳ್ಳಾಪುರ ಜಿಲ್ಲೆಯ ನಂದಿ ಬೆಟ್ಟದ ಪದ ತಳದಲ್ಲಿರುವ ಭೋಗ ನಂದೀಶ್ವರ ದೇವಸ್ಥಾನದಲ್ಲಿ. ಇಂತಹ ರಂಧ್ರವುಳ್ಳ ವಿಗ್ರಹಗಳಿಂದ ದೇಗುಲದ ಒಳಗಡೆಯ ಗುಡಿಗೆ ಗಾಳಿ ಬೆಳಗೂ ಸಿಗುತ್ತದೆ. ಜೊತೆಗೆ ಹೊರಗಡೆ ಸುಂದರವಾಗಿ ಮೂರ್ತಿಯೂ ಕಾಣುತ್ತದೆ. ಇಂಥ ವಿವಿಧ ಮೂರ್ತಿಗಳ ಅನೇಕ ಜಾಲಂಧ್ರಗಳು ನಮಗೆ ಈ ದೇವಾಲಯದಲ್ಲಿ ಕಾಣಸಿಗುತ್ತವೆ.

—ವೀರೇಶ ಬಂಗಾರಶೆಟ್ಟರ ಕುಷ್ಟಗಿ

